ಕೊರಟಗೆರೆ ತಾಲ್ಲೂಕಿನಲ್ಲಿ ಪ್ರಾರ್ಥನಾ ಮಂದಿರ ಹಾಗೂ ಸ್ಮಶಾನಗಳ ಅಭಿವೃದ್ಧಿ.

2208(2261) ಶ್ರೀ ಚಿನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಮುಸ್ಲಿಂ ಬಾಂದವರ ಪ್ರಾರ್ಥನಾ ಮಂದಿರ ಮತ್ತು ಸ್ಮಶಾನಗಳ ಸಂಖ್ಯೆ ಎಷ್ಟು?

2. ಇದರ ಅಭಿವೃದ್ಧಿಗೆ ಸರ್ಕಾರದಿಂದ ಹಾಗೂ ವಕ್ಫ್ ಮಂಡಳಿಯಿಂದ ಬಿಡುಗಡೆಗೊಂಡಿರುವ ಅನುದಾನವೆಷ್ಟು?

3. ಈ ತಾಲ್ಲೂಕಿನ ಹಲವಾರು ಪ್ರಾರ್ಥನಾ ಮಂದಿರಗಳು ತುಂಬಾ ದುಸ್ಥಿತಿಯಲ್ಲಿದ್ದು ಇದರ ಅಭಿವೃದ್ಧಿಗೆ ಸರ್ಕಾರವು ಶೀಘ್ರವೇ ಅನುದಾನ ಬಿಡುಗಡೆ ಮಾಡುವುದೇ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

1. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿ 11 (ಹನ್ನೊಂದು) ಮಸೀದಿಗಳು ಹಾಗೂ 3 (ಮೂರು) ಖಬ್ರಸ್ತಾನಗಳಿವೆ.

2. 2000-2001ನೇ ಸಾಲಿನಲ್ಲಿ ಸರ್ಕಾರವು ಕೊರಟಗೆರೆ ತಾಲ್ಲೂಕಿನ 5 ವಕ್ಫ್ ಸಂಸ್ಥೆಗಳಿಗೆ ರೂ. 1,20,000-00 ಅನುದಾನವನ್ನು ಬಿಡುಗಡೆ ಮಾಡಿದೆ.

3. ಸರ್ಕಾರವು ಅಗತ್ಯತೆ ಇರುವ ವಕ್ಫ್ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತದೆ. ಹಾಗಾಗಿದ್ದು, ಸದರಿ ಸಂಸ್ಥೆಯಿಂದ ಕೋರಿಕೆ ಬಂದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಅನುಬಂಧ - ಅ

ಕ್ರಮ ಸಂಖ್ಯೆ	ವಕ್ಫ್ ಸಂಸ್ಥೆಯ ಹೆಸರು	ಮಂಜೂರಾದ ಹಣ ರೂ.
1.	ಖಬ್ರಸ್ಥಾನ, ಕೊಳಲ, ಕೊರಟಗೆರೆ ತಾಲ್ಲೂಕು	25,000-00
2.	ಜಾಮಿಯಾ ಮಸೀದಿ, ಕೊಳಲ, ಕೊರಟಗೆರೆ ತಾ:	25,000-00
3.	ಖಬ್ರಸ್ಥಾನ, (ಶಿಯಾ) ಹೋವನಹಳ್ಳಿ	25,000-00
4.	ಜಾಮಿಯಾ ಮಸೀದಿ, ಕೊಳಲ,	20,000-00
5.	ಬೈತುಲ್ ಖುಚ್ನಿ ಅರಾಬಿಕ್ ಮದ್ರಸಾ, ಕರೀಂಪುರ್, ಕೊರಟಗೆರೆ ತಾಲ್ಲೂಕು	25,000-00
	ಒಟ್ಟು	1,20,000-00